# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

**ವಿಶೇಷ ಮೊಕದ್ದಮೆ ಸಂಖ್ಯೆ: 991 /2021**

**ಪಿ.ಡಬ್ಲ್ಯೂ:13 (ಸಿಡಬ್ಲ್ಯೂ:4 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ಮತಿ ಈರಮ್ಮ** |
| **ತಂದೆಯ ಹೆಸರು** | : | **ಬಸವರಾಜು** |
| **ವಯಸ್ಸು** | : | **42 ವರ್ಷ** |
| **ಕೆಲಸ** | : | **ಎಫ್.ಡಿ.ಎ., ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 08.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಿಶೇಷ ಸರ್ಕಾರಿ ಅಭಿಯೋಜಕರಿಂದ:**

ನಾನು 2017 ರಿಂದ ಬಳ್ಳಾರಿಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ ದಲ್ಲಿ ಪ್ರಥಮ ದರ್ಜೆ ಸಹಾಯಕಳಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಪ್ರಕರಣದ ಸಾಕ್ಷಿ ಚಾಸಾ-.5 ಈ ಹಿಂದೆ ನನ್ನ ಸಹೋದ್ಯೋಗಿಯಾಗಿದ್ದು ಪ್ರಸ್ತುತ ನಿವೃತ್ತಿ ಹೊಂದಿರುತ್ತಾರೆ.

**2.** ದಿ:6.11.2019 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ನನ್ನನ್ನು ಮತ್ತು ಚಾಸಾ.5 ರವರನ್ನು ಫಿರ್ಯಾದಿ ಪೊಲೀಸರು ಅವರ ಕಚೇರಿಗೆ ಬರಮಾಡಿಕೊಂಡಿದ್ದರು. ನಾವು ಸದರಿ ಕಚೇರಿಗೆ ಹೋದಾಗ ಪ್ರಭುಲಿಂಗ ಹಿರೇಮಠ ಎನ್ನುವ ಅಧಿಕಾರಿ ಇದ್ದರು . ಸದರಿ ಅಧಿಕಾರಿ ಆ ಕಾಲಕ್ಕೆ ಅವರ ಕಚೇರಿಯಲ್ಲಿದ್ದ ಸತ್ಯ ನಾರಾಯಣ ಎಂಬುವವರನ್ನು

ಫಿರ್ಯಾದಿದಾರರು ಎಂದು ನಮೂದಿಸಿ ನಮ್ಮಗಳಿಗೆ ಪರಿಚಯಿಸಿದರು. ನಮ್ಮಗಳನ್ನು ಧ್ವನಿ ಮುದ್ರಣಗಳನ್ನು ವಾಸ್ತವಿಕ ಧ್ವನಿಗೆ ಹೋಲಿಸುವ ಕಾರ್ಯಕ್ಕೆಂದು ಬರಮಾಡಿಕೊಂಡಿದ್ದರು.

**3.** ಮೇಲೆ ಹೇಳಿದ ಅಧಿಕಾರಿ ಪ್ರಭುಲಿಂಗ ಹಿರೇಮಠ ರವರು ಆ ಕಾಲಕ್ಕೆ ಅವರ ಕಚೇರಿಯಲ್ಲಿ ನಮಗೆ 2 ಸಿಡಿಗಳನ್ನು ತೋರಿಸಿದರು. ಸದರಿ ಸಿಡಿಗಳ ಪೈಕಿ ಒಂದರ ಮೇಲೆ 5 ಹಾಗೂ ಮತ್ತೊಂದರ ಮೇಲೆ 11 ಎಂದು ಬರೆಯಲಾಗಿತ್ತು. ಸದರಿ ಸಿಡಿಗಳಲ್ಲಿ ಇದ್ದಂತಹ ಧ್ವನಿಗಳನ್ನು ಸದರಿ ಅಧಿಕಾರಿ ಬೆರಳಚ್ಚು ಮಾಡಿಸಿದರು. ಬೆರಳಚ್ಚು ಮಾಡಿಸಿದ ನಂತರ ಬೆರಳಚ್ಚು ಮಾಡಿದ ಸಂಗತಿಗಳನ್ನು ನಮಗೆ ಓದಿಕೊಳ್ಳಲು ತಿಳಿಸಿದರು. 5 ಮತ್ತು 11 ರ ಸಿಡಿಗಳನ್ನು ನೋಡಿದರೆ ಗುರುತಿಸಬಲ್ಲೆ. ಅವು ಈಗ ನನಗೆ ತೋರಿಸಿದ ಸಿಡಿಗಳಾಗಿವೆ. ಸದರಿ ಸಿಡಿಗಳನ್ನು ಈಗಾಗಲೇ ನಿಪಿ.18 ಮತ್ತು 20 ಎಂದು ಗುರುತು ಮಾಡಲಾಗಿದೆ.

**4.** ನಂತರ ಸದರಿ ಬೆರಳಚ್ಚು ಸಂಗತಿಗಳನ್ನು ಫಿರ್ಯಾದಿದಾರರಾದ ಸತ್ಯ ನಾರಾಯಣ 2 ಬಾರಿ ಓದುವಂತೆ ಸದರಿ ಅಧಿಕಾರಿ ತಿಳಿಸಿದ್ದರಲ್ಲದೆ, ಫಿರ್ಯಾದಿದಾರರು 2 ಬಾರಿ ಓದಿದಾಗ ಓದಿದ ಧ್ವನಿಯನ್ನು ಸೋನಿ ವಾಯ್ಸ್ ರೆಕಾರ್ಡ ಮುಖೇನ ಪ್ರತ್ಯೇಕ 2 ಸಿಡಿಗಳಲ್ಲಿ ಸಂಗ್ರಹಿಸಿಕೊಂಡರು. ಸಿಡಿಗಳಿಗೆ ಧ್ವನಿಗಳನ್ನು ಲ್ಯಾಪಟಾಟ್ ಮುಖೇನ ಸಂಗ್ರಹಿಸಲಾಯಿತು. ಈ ರೀತಿ ತಯಾರಿಸಿದ ಸಿಡಿಗಳಿಗೆ 13 ಮತ್ತು 13 ಎ ಎಂದು ಅಂಕಿಗಳನ್ನು ನೀಡಿದರು. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಮಾಡಲಾಯಿತು. ಸದರಿ ಪಂಚನಾಮೆ ಕ್ರಮವು ಈಗ ನನಗೆ ತೋರಿಸಿದ ದಾಖಲೆಯಾಗಿರುತ್ತದೆ. ಸದರಿ ಪಂಚನಾಮೆ ದಾಖಲೆಯನ್ನು ಈಗಾಗಲೇ ನಿಪಿ.6 ಎಂದು ಗುರುತು ಮಾಡಲಾಗಿದೆ. ನಿಪಿ.6 ರಲ್ಲಿ ನನ್ನ ರುಜುವನ್ನು **ನಿಪಿ.6(ಡಿ)** ಎಂದು ಈಗ ಗುರುತು ಮಾಡಲಾಯಿತು. ಸಿಡಿ 13 ಮತ್ತು 13 ಎ ಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳು ಈಗ ನನಗೆ ತೋರಿಸಿದ ಸಿಡಿಗಳಾಗಿವೆ. ಸದರಿ ಸಿಡಿಗಳನ್ನು ಇರಿಸಿರುವ ಕವರ್ ಗಳ

ಮೇಲೆ ನನ್ನ ರುಜುಗಳು ಇರುತ್ತವೆ. ನನ್ನ ರುಜುಗಳನ್ನು **ನಿಪಿ.23 ಎ ಮತ್ತು ನಿಪಿ.24 ಎ** ಎಂದು ಗುರುತು ಮಾಡಲಾಯಿತು.

**5.** ಈಗ ನನಗೆ ತೋರಿಸಿದ ಬೆರಳಚ್ಚು ನಾನು ಈಗಾಗಲೇ ನುಡಿದಂತೆ ಫಿರ್ಯಾದಿದಾರರು 2 ಬಾರಿ ಓದಿದ ಬೆರಳಚ್ಚು ಬರವಣಿಗೆಯಾಗಿರುತ್ತದೆ. ಸದರಿ ಬೆರಳಚ್ಚು ಬರವಣಿಗೆಗಳನ್ನು ಈಗಾಗಲೇ ನಿಪಿ.7 ರಿಂದ 10 ಎಂದು ಗುರುತು ಮಾಡಲಾಗಿದೆ. ನಿಪಿ.7 ರಿಂದ 10 ರ ದಾಖಲೆಗಳಲ್ಲಿ ನನ್ನ ರುಜುಗಳನ್ನು **ನಿಪಿ.7 (ಬಿ), 8(ಬಿ), 9 (ಬಿ) ಮತ್ತು ನಿಪಿ.10 (ಬಿ)** ಎಂದು ಗುರುತು ಮಾಡಲಾಯಿತು. ಆ ಕಾಲಕ್ಕೆ ತೆಗೆದ ಫೋಟೋ ಗಳನ್ನು ಸಹ ನೋಡಿದರೆ ನಾನು ಗುರುತಿಸಬಲ್ಲೆ. ಅವುಗಳು ಈಗ ನನಗೆ ತೋರಿಸಿದ ಫೋಟೋಗಳಾಗಿದ್ದು, 2 ಫೋಟೋ ಗಳನ್ನು ಒಟ್ಟಾರೆ ನಿಪಿ.11 ಎಂದು ಈಗಾಗಲೇ ಗುರುತು ಮಾಡಲಾಗಿದೆ.

**6.** ತದನಂತರ ಆರೋಪಿ ನೌಕರ ಟಿ.ವಿ. ಚಂದ್ರಪ್ಪ ಎಂಬುವವರನ್ನು ಹಿರೇಮಠ ಅಧಿಕಾರಿಯವರು ಕರೆಸಿಕೊಂಡರು. ಸದರಿ ಆರೋಪಿ ನೌಕರ ಬಂದ ನಂತರ ನಾನು ಈಗಾಗಲೇ ನುಡಿದ ಸಿಡಿ ಸಂಖ್ಯೆ 5 ಮತ್ತು 11 ರಲ್ಲಿ ಆ ಕಾಲಕ್ಕಾಗಲೇ ಸಂಗ್ರಹಿಸಿದ್ದರು ಎನ್ನಲಾದ ಆರೋಪಿಯ ಧ್ವನಿಗಳನ್ನೂ ಸಹ ಪ್ರತ್ಯೇಕವಾಗಿ ಬೆರಳಚ್ಚು ಮಾಡಿಸಲಾಯಿತು. ಈ ರೀತಿ ಬೆರಳಚ್ಚು ಮಾಡಿಸಿದ ಬರವಣಿಗೆಗಳನ್ನು ನನಗೂ ಮತ್ತು ಚಾಸಾ.5 ರವರಿಗೂ ಓದಲು ನೀಡಿದರು. ನಂತರ ಬೆರಳಚ್ಚು ಮಾಡಿಸಿದ ಬರವಣಿಗೆಯನ್ನು ಆರೋಪಿ ನೌಕರ 2 ಬಾರಿ ಓದಿದರು. ಆ ಸಮಯದಲ್ಲಿ ರೆಕಾರ್ಡ್ ಚಾಲ್ತಿಯಲ್ಲಿತ್ತು. ರೆಕಾರ್ಡ್ ಮಾಡಿದ್ದ ಆರೋಪಿಯ ಧ್ವನಿಯನ್ನು ಲ್ಯಾಪಟಾಪ್ ವಸ್ತುವನ್ನು ಉಪಯೋಗಿಸಿ ಸದರಿ ಅಧಿಕಾರಿ 2 ಪ್ರತ್ಯೇಕ ಸಿಡಿಗಳಿಗೆ ವರ್ಗಾಯಿಸಿ ಸಂಗ್ರಹಿಸಿಕೊಂಡರು. ಈ ರೀತಿ ತಯಾರಿಸಿದ ಸಿಡಿಗಳಿಗೆ 14 ಮತ್ತು 14 ಎ ಎಂದು ಅಂಕಿಗಳನ್ನು ನೀಡಿದರು.

**Spl.C.No. 991/2021**
**P.W. 13 (C.W. 4)**
**Date : 08.07.2026**

7. ಆರೋಪಿ ನೌಕರನ ಧ್ವನಿಗಳನ್ನು ಸಂಗ್ರಹಿಸಿದಾಗ ಬರೆದಂತಹ ಪಂಚನಾಮೆಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ. ಅದು ಈಗ ನನಗೆತೋರಿಸಿದ ದಾಖಲೆಯಾಗಿದ್ದು ಅದನ್ನು ನನ್ನಿಂದ **ನಿಪಿ.54** ಎಂದು ಗುರುತು ಮಾಡಲಾಯಿತು. ನಿಪಿ.54 ರಲ್ಲಿರುವ ನನ್ನ ರುಜುವನ್ನು **ನಿಪಿ.54 ಎ** ಎಂದು ಗುರುತು ಮಾಡಲಾಯಿತು. ಆರೋಪಿಗೆ ಸಂಬಂಧಪಟ್ಟ ಪ್ರತಿಲೇಖ ದಾಖಲೆಗಳು ಈಗ ನನಗೆ ತೋರಿಸಿದ ದಾಖಲೆಗಳಾಗಿವೆ. ಅವುಗಳನ್ನು ಈಗ ಅನುಕ್ರಮವಾಗಿ **ನಿಪಿ.55 ರಿಂದ ನಿಪಿ.57** ಎಂದು ಗುರುತು ಮಾಡಲಾಯಿತು. ಅವುಗಳಲ್ಲಿನ ನನ್ನ ರುಜುಗಳನ್ನು **ನಿಪಿ.55 ಎ , 56 ಎ ಮತ್ತು 57 ಎ** ಎಂದು ಗುರುತು ಮಾಡಲಾಯಿತು. ಆ ಸಮಯದಲ್ಲೂ ಸಹ ಫೋಟೋಗಳನ್ನು ತೆಗೆಯಲಾಯಿತು. ಸದರಿ ಫೋಟೋ ಗಳು ನನಗೆ ತೋರಿಸಿದ 2 ಫೋಟೋಗಳಾಗಿದ್ದು ಅವುಗಳನ್ನು ಒಟ್ಟಾರೆ **ನಿಪಿ.58** ಎಂದು ಗುರುತು ಮಾಡಲಾಯಿತು. ಈಗಾಗಲೇ ಉಲ್ಲೇಖಿಸಿದ 14 ಮತ್ತು 14 ಎ ಸಿಡಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಿಡಿಗಳನ್ನ ಇರಿಸಿರುವ ಕವರ್ ಗಳ ಮೇಲೆ ನನ್ನ ರುಜುಗಳು ಇರುತ್ತವೆ. ಸದರಿ ರುಜುವನ್ನು ಈಗ **ನಿಪಿ.48(ಎ) ಮತ್ತು ನಿಪಿ49(ಎ)** ಎಂದು ಗುರುತು ಮಾಡಲಾಯಿತು.

**8**. ಫಿರ್ಯಾದಿದಾರರು ಮತ್ತು ಆರೋಪಿಯ ಧ್ವನಿಗಳನ್ನು ಮುದ್ರಿಸಿ ಸಂಗ್ರಹಿಸುವ ಸಲುವಾಗಿ ನನ್ನನ್ನು ಮತ್ತು ಚಾಸಾ.5 ರವರನ್ನು ಫಿರ್ಯಾದಿ ಪೊಲೀಸರು ಕರೆಸಿದ್ದರು. ***ನಾನು ಆರೋಪಿ ವ್ಯಕ್ತಿಯನ್ನು ನೋಡಿದರೆ ಗುರುತಿಸಬಲ್ಲೆ. ಆತ ಈಗ ನ್ಯಾಯಾಲಯದ ಮುಂದೆ ಇದ್ದಾರೆ.***

**Spl.C.No. 991/2021**
**P.W. 13 (C.W. 4)**
**Date : 08.07.2026**

**ಪಾಟೀ ಸವಾಲುಃ ಶ್ರೀ ಯುಬಿಆರ್ಃ ವಕೀಲರು ಆರೋಪಿಯ ಪರಃ**

**9.** ನಾನು ಲೋಕಾಯುಕ್ತ ಕಚೇರಿಗೆ ಹೋಗುವ ನಿಕಟಪೂರ್ವ ಫಿರ್ಯಾದಿ ಹಾಗೂ ಆರೋಪಿ ಇವರುಗಳ ಪರಿಚಯ ನನಗೆ ಇರಲಿಲ್ಲ. ನನ್ನ ಮುಂದೆ ಸಿಡಿಗಳನ್ನು ಪ್ಲೇಮಾಡಿ ಅದರಲ್ಲಿದ್ದ ಧ್ವನಿಗಳನ್ನು ಬೆರಳಚ್ಚು ಮಾಡಲಾಗಿದೆ ಎಂದು ನಾನು ಈಗಾಗಲೇ ನುಡಿದಿದ್ದೇನೆ, ಆದರೆ ಬೆರಳಚ್ಚು ಮಾಡಿದ ಸಂಗತಿಗಳ ಧ್ವನಿ ಸಮಯದ ಬಗ್ಗೆ ನಾನು ಉತ್ತರಿಸಲಾರೆ. ಸಿಡಿ ಧ್ವನಿಯನ್ನು ನಮಗೆ ಕೇಳಿಸಿದರು. ನಮಗೆ ಕೇಳಿಸಿದ ಎಲ್ಲಾ ಧ್ವನಿಯನ್ನು ನಾನು ಈಗಾಗಲೇ ನುಡಿದಂತೆ ಬೆರಳಚ್ಚು ಮಾಡಿಸಲಾಯಿತು.

**10**. ನೀವೇ ಒಪ್ಪಿಕೊಂಡ ಪಂಚನಾಮೆ ಸಂಗತಿಗಳ ಪ್ರಕಾರ ಸಿಡಿಗಳಲ್ಲಿ ಸಂಗ್ರಹಿಸಿದ್ದ ಒಟ್ಟಾರೆ ಧ್ವನಿಯ ಕೆಲ ಆಯ್ದ ಭಾಗಗಳನ್ನು ಮಾತ್ರ ಬೆರಳಚ್ಚು ಮಾಡಿಸಲಾಯಿತು ಎಂಬುದಾಗಿ ನಿಪಿ.6 ಮತ್ತು 54 ರಲ್ಲಿ ನಮೂದಿಸಿದೆ ಎಂದರೆ ಸರಿ . ಬೆರಳಚ್ಚು ಮಾಡಿಸಿದ ಸಂಗತಿಗಳನ್ನು ಓದಬೇಕಾದರೆ ಲೋಕಾಯುಕ್ತ ಪೊಲೀಸರ ಸಿಬ್ಬಂದಿಗಳು ಮತ್ತು ಅಧಿಕಾರಿಗಳು ಎಲ್ಲರೂ ಸಹ ಆ ಸ್ಥಳದಲ್ಲಿ ಇದ್ದರು ಎಂದರೆ ಸರಿ .

**11**. ಫಿರ್ಯಾದಿ ಮತ್ತು ಆರೋಪಿ ನೀವು ನುಡಿದಂತೆ ಬೆರಳಚ್ಚು ಮಾಡಿದ ಸಂಗತಿಗಳನ್ನು ಓದಲು ಎಷ್ಟು ನಿಗಧಿತ ಸಮಯವನ್ನು ತೆಗೆದುಕೊಂಡರು ಎಂಬುದಾಗಿ ನೀವು ಉತ್ತರಿಸಲಾರಿರಿ ಎಂದರೆ ಸರಿ. ಧ್ವನಿಗಳನ್ನು ಗುರತಿಸಲು ನಾನು ಯಾವುದೇ ವಿಶೇಷ ತರಬೇತಿಯನ್ನು ಹೊಂದಿಲ್ಲ.

**12.** ನೀವು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಯಾವುದೇ ಸಿಡಿಗಳ ಧ್ವನಿಗಳನ್ನು ನಿಮಗೆ ಕೇಳಿಸಿಲ್ಲ, ಯಾವುದೇ ಸಿಡಿಗಳ ಧ್ವನಿಗಳನ್ನು ನೀವು ನುಡಿದಂತೆ ಬೆರಳಚ್ಚು

**Spl.C.No. 991/2021**
**P.W. 13 (C.W. 4)**
**Date : 08.07.2026**

ಮಾಡಿಸಿರುವುದಿಲ್ಲ, ನೀವು ನುಡಿದಂತೆ ಬೆರಳಚ್ಚು ಮಾಡಿಸಿದ ಸಂಗತಿಗಳನ್ನು ಆರೋಪಿಯಾಗಲೀ ಅಥವಾ ಫಿರ್ಯಾದಿಯಾಗಲೀ ನಿಮ್ಮ ಸಮಕ್ಷಮ ಓದಿರುವುದಿಲ್ಲ, ಆದರೂ ಸಹ ಫಿರ್ಯಾದಿ ಪೊಲೀಸರಿಗೆ ಸಹಾಯ ಮಾಡಲು ನೀವು ಅಸತ್ಯ ನುಡಿದಿರಿ ಎಂದರೆ ಸರಿಯಲ್ಲ. ಫಿರ್ಯಾದಿ ಪೊಲೀಸರು ನುಡಿದಂತೆ ನೀವು ನಡೆದುಕೊಳ್ಳದಿದ್ದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಏಕೈಕ ಕಾರಣಕ್ಕೆ ನೀವು ಅಸತ್ಯ ನುಡಿದಿರಿ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**